ತರಲು ಸೂಚಿಸಿದ. ಕಿರಣ ಅಧಿಕಾರಿಯ ಎದುರಿಗಿನ ಸೋಫಾಕ್ಕೆ ಒರಗಿ ನಿಂತಿದ್ದ.

'ಕಿರಣ, ನೀವು ಈ ಮನೆಯ ಭಾವಿ ಅಳಿಯ. ನೀವೇ ನಿಂತ್ರೆ ಹೇಗೆ? ನೀವು ಕುಳಿತು ಮಾತಾಡಿ' ಅಧಿಕಾರಿಯ ಮಾತನ್ನು ಅಲ್ಲಗಳೆಯಲಾರ. ಅವನ ಮಾತಿಗೆ ಗೌರವ ಸೂಚಿಸುವಂತೆ ಸೋಫಾದಲ್ಲಿಯೇ ಕುಳಿತ.

'ಕಿರಣ, ನಿಮ್ಮನ್ನು ನೋಡಿದಾಗ ನಾನು ಎಲ್ಲೋ ನೋಡಿದ ಹಾಗಿರುವ ಮುಖ ಅನಿಸಿತು. ನನ್ನನ್ನು ನೀವು ಎಂದಾದರೂ ಭೇಟಿಯಾಗಿರುವಿರಾ?' ಅಧಿಕಾರಿಯ ಪ್ರಶ್ನೆಗೆ ಕಿರಣನ ಮುಖದಲ್ಲಿದ್ದ ಮಂದಹಾಸ ಮರೆಯಾಯಿತು. ಅಧಿಕಾರಿ ಅದನ್ನು ಗಮನಿಸಿದವನೇ ಪಿಸಿಯನ್ನು ಮೆತ್ತಗೆ ತಿವಿದ. ಪಿಸಿ ಇನ್ಸ್‌ಪೆಕ್ಟರ್‌ನತ್ತ ಬಾಗಿ ಗುಟ್ಟಾಗಿ ನುಡಿದ.

'ಆ ದಿನ ಮರಳು ದಿಣ್ಣೆಯ ಬಳಿ ಪಾಂಬುವಿನ ಕಾರಿನಲ್ಲಿದ್ದ ವ್ಯಕ್ತಿ ಈತನೆ' ಸ್ಪಷ್ಟವಾಗಿ ಅವನೇ ಇವನು ಅನ್ನುವುದನ್ನು ಅಧಿಕಾರಿಗೆ ತಿಳಿಸಿದ. ಇನ್ಸ್‌ಪೆಕ್ಟರ್‌ನ ಬಾದಾಮಿಯಾಕಾರದ ಕಣ್ಣುಗಳು ಹೊಳಪು ಪಡೆದು ಸಂಕುಚಿಸಿದವು. ಅದೇ ತಗ್ಗಿದ ದನಿಯಲ್ಲಿ ಪಿಸಿಯನ್ನು ಕೇಳಿದ.

'ಆ ದಿನ ಪಾಂಬು ನಮ್ಮನ್ನು `ಬಂಡೆ'ಗೆ ಬರಲು ಹೇಳಿ ಮೋಸ ಮಾಡಿದ್ದ. ಆ ಹುಡುಗನೇ ಇವನಾ?'

'ಹೌದು ಸಾರ್. ನೋಡಿ ಆ ಕಣ್ಣುಗಳು... ಕಣ್ಣುಗಳು. ಅದೇ ಕ್ರಾಪು. ತುಂಬಿದ ಗಲ್ಲ, ಮೇಲ್ತುಟಿಯನ್ನು ಮುಚ್ಚಿದ ದಪ್ಪ ಮೀಸೆ. ಸಂದೇಹವೇ ಇಲ್ಲ ಸಾರ್. ಇವನೇ ಆ ಹುಡುಗ'

ಇನ್ಸ್‌ಪೆಕ್ಟರ್‌ನ ಕೆಳತುಟಿ ಹಲ್ಲಿನಿಂದ ಒತ್ತಿ ಹಿಡಿಯಲ್ಪಟ್ಟಿತು.

* * *

ಕಿರಣನ ಮುಗ್ಧ ಮುಖ; ಆಕರ್ಷಕ ನಿಲುವಿಗೆ ಹೆಣ್ಣುಗಳು ಒಲಿದು ಬಂದರೆ ಆಶ್ಚರ್ಯವಿಲ್ಲ. ಸೆಳೆದುಕೊಳ್ಳಬಲ್ಲ ಹಿತವಾದ ಮಾತು. ಲಹರಿ ಮೇನಕಾಳಂತಹ ಶ್ರೀಮಂತ ಹುಡುಗಿಯರನ್ನು ಸುಧಾರಿಸಬಲ್ಲ ಚಾಕಚಕ್ಯತೆಯ ತರುಣ. ಮೇನಕಾ ತನಗೊಲಿದ ಅದೃಷ್ಟವನ್ನು ಬಿಟ್ಟು ಕೊಡದವಳು. ಲಹರಿಯ ಕಣ್ಮರೆಯ ಹಿಂದೆ ಅವಳ ಪಾತ್ರ ಹಿರಿದು?! ತನಗೆ ದೊರಕಿದ ಮಾಹಿತಿಯನ್ನು ಚಾಚೂ ತಪ್ಪದೆ ವರದಿ ಮಾಡುವ ಮೇನಕಾಗೆ ಲಹರಿ ತಡೆಯಾಗಿದ್ದೇಕೆ?

ಯೋಚನೆಯ ಗುಂಗಿನಲ್ಲಿದ್ದ ಇನ್ಸ್‌ಪೆಕ್ಟರ್ ರಾಜಧಾನಿಯನ್ನು ಪಿಸಿ ಸಾರಂಗ ಮೆಲ್ಲಗೆ ಕರೆದ.

'ಸಾರ್, ಇದು ಗೋಸುಂಬೆ ಇದ್ದ ಹಾಗಿದೆ. ಬಣ್ಣ ಬದಲಾಯಿಸುವ ಮುನ್ನ ಹಿಡಿಯಬೇಕು' ಪಿಸಿಯ ಸಜೆಶನ್ ಅಧಿಕಾರಿಗೆ ಸರಿ ಕಾಣಿಸಲಿಲ್ಲ.

'ಗಮನಿಸ್ತಾ ಇದ್ದೀನಿ. ಅವ್ನು ಗೋಸುಂಬೆ ತರದ ಮನುಷ್ಯ ಅನ್ಸೊಲ್ಲ'

ತನ್ನ ಮಾತನ್ನು ನಂಬದ ಇನ್ಸ್‌ಪೆಕ್ಟರ್ ಮೇಲೆ ಅಸಮಾಧಾನವೆನಿಸಿತು ಪಿಸಿಗೆ. ತನ್ನ ಮಾತಿಗೂ ಒಂದಲ್ಲ ಒಂದು ದಿನ ಬೆಲೆ ಬರುತ್ತದೆಯೆನ್ನುವುದು ಅವನ ಆಶಾವಾದ.

ಪಿಸಿ ಕಿವಿಯೂದಿದ ಮೇಲೆ ಕಿರಣನನ್ನು ಪರೀಕ್ಷಾ ದೃಷ್ಟಿಯಿಂದ ನೋಡಿದ ಇನ್ಸ್‌ಪೆಕ್ಟರ್ ರಾಜಧಾನಿ. ಕಿರಣ ಹಾಗನಿಸಲಿಲ್ಲ.

ಕಿರಣ ಅಧಿಕಾರಿಯ ಮುಂದೆ ಕೈ ಕಟ್ಟಿ ನಿಂತ.

'ಕಿರಣ, ನಿಮ್ಮತ್ರ ಕೆಲವು ಪ್ರಶ್ನೆಗಳನ್ನು ಕೇಳ್ಬೇಕಿದೆ. ಅದು ಈ ಮನೆಗೆ ಸಂಬಂಧಪಟ್ಟಿರೋದು' ಸುತ್ತಲೂ ಯಾರಿದ್ದಾರೆಂದು ಗಮನಿಸಿದ ಅಧಿಕಾರಿ. ರಾಮಸ್ವಾಮಿ ದೂರದಲ್ಲಿ ನಿಂತಿದ್ದ. ಅಡುಗೆಯ ಕೆಲಸದಾಳು ಅಲ್ಲಿದ್ದವರಿಗೆ ತಂಪು ಪಾನೀಯವನ್ನು ನೀಡಿದ. ಅಧಿಕಾರಿ ಒಂದು ಗ್ಲಾಸನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡ.

## ರೊಟ್ಟಿ

ಅರೆ ಹೊಟ್ಟೆಯಲ್ಲಿ
ಬರಿ ತಟ್ಟೆಯಲ್ಲಿ ಬರೆದ
ಕವನ
ಒಣ ರೊಟ್ಟಿಯಿತ್ತು
ಪ್ರಾಣ ಕಾಪಾಡಿತು
ಅವನ

★ ಭಾಸ್ಕರ ಕೆ.




'ರಾಮಸ್ವಾಮಿ, ಸ್ವಲ್ಪ ಹೊರಗಿರು. ಮತ್ತೆ ನಿನ್ನನ್ನು ಕರೆಯುತ್ತೇನೆ' ಅಧಿಕಾರಿಯ ಮಾತಿಗೆ ನಿರಾಶೆ ಮೂಡಿದರೂ ಅವನ ಮಾತಿಗೆ ತಲೆಬಾಗಿದ.

'ಆಯ್ತು, ಸಾಹೇಬ್ರೆ' ಅವನು ಹೊರಗೆ ನಡೆದ ಮೇಲೆ ಅಡುಗೆಯ ಕೆಲಸದಾಳು ಕೂಡ ತನ್ನ ಕೆಲಸಕ್ಕೆ ಹೊರಟ.

ಇನ್ಸ್‌ಪೆಕ್ಟರ್ ರಾಜಧಾನಿ ಸ್ವಲ್ಪ ಹೊತ್ತು ಗಂಭೀರನಾದ. ಕಿರಣನನ್ನೇ ಗಮನಿಸಿದವನು ಸ್ವಲ್ಪ ಮುಂದಕ್ಕೆ ಬಾಗಿದ.

'ಕಿರಣ, ನೀವು ಇಬ್ಬರು ಹುಡುಗಿಯರನ್ನು ಪ್ರೀತಿಸುತ್ತಿದ್ದೀರಿ?' ಇನ್ಸ್‌ಪೆಕ್ಟರ್ ಮಾತಿಗೆ ತಬ್ಬಿಬ್ಬಾದ ಕಿರಣ. ಮಾತು ತಮಾಷೆಯಾಗಿರಲಿಲ್ಲ. ಕಿರಣ ಸಶಬ್ದ ನಗು ಹೊರಡಿಸಿದ. ಇನ್ಸ್‌ಪೆಕ್ಟರ್ ಕಕ್ಕಾಬಿಕ್ಕಿಯಾದ.

ಕಿರಣ ಸಭ್ಯ, ಒಳ್ಳೆ ನಡತೆಯ ಹುಡುಗ! ಅವನ ನಗುವಿಗೂ ನಡತೆಗೂ ಸರಿ ಬರದು.

ಪಿಸಿ ಸಾರಂಗ ಬಿಗು ಮುಖದಿಂದ ಅಧಿಕಾರಿಯನ್ನು ನೋಡಿದ ತನ್ನ ಮಾತು ಸರಿಯೆನ್ನುವಂತೆ.

'ಈ ನಗುವಿಗೆ ಅರ್ಥವೇನು ಕಿರಣ? ನಾನು ಕೇಳಿರೋದು ಲಹರಿ ಮತ್ತು ಮೇನಕಾರನ್ನ ನೀನು ಪ್ರೀತಿಸ್ತಿದ್ದೀಯಾಂತ. ಇಲ್ಲ, ಅವರಿಬ್ಬರು ನಿನ್ನನ್ನು ಪ್ರೀತಿಸ್ತಿದ್ದಾರಾಂತ?' ಇನ್ಸ್‌ಪೆಕ್ಟರ್ ತನ್ನ ಪ್ರಶ್ನೆಯನ್ನು ಸರಿಪಡಿಸಿಕೊಂಡು ಕೇಳಿದ. ಮುಗುಳ್ನಗುವಿಗೆ ತಿರುಗಿತು ಕಿರಣನ ನಗು.

'ಇಲ್ಲ, ಅದು ಹೇಗೆ ಸಾಧ್ಯ ಇನ್ಸ್‌ಪೆಕ್ಟರ್ ಸಾಹೇಬ್ರೇ? ನಾನು ಇಷ್ಟಪಟ್ಟಿರೋದು ಮೇನಕಾನ. ಅವಳಿಗೂ ನಾನು ಹಿಡಿಸಿದ ವ್ಯಕ್ತಿ. ಆದ್ರೆ, ಅವಳಿಗೆ ನನ್ನ ಮೇಲೆ ಅನುಮಾನವಿತ್ತು ಲಹರಿಯ ವಿಷಯದಲ್ಲಿ. ನಾನು ಲಹರೀನ ಪ್ರೀತಿಸ್ತಿದ್ದೀನಿಂತ ಅವಳು ತಿಳ್ಕೊಂಡಿದ್ಲು. ಸ್ವಲ್ಪ ಸಮಯ ಅಪಾರ್ಥ ಮಾಡಿಕೊಂಡು ನನ್ನ ದೂರ ಮಾಡಿದ್ಲು. ಈಗ ಲಹರಿಯ ಕಣ್ಮರೆಯ ನಂತರ ಮತ್ತೆ ನನ್ನ ಒಪ್ಪಿಕೊಂಡಿದ್ದಾಳೆ. ಇಷ್ಟಕ್ಕೂ ನಾನು ಕಾಶಮ್ಮ ಹಿತೈಷೀಂತ ನನ್ನ ಹಂಗಿಸ್ತಾಳೆ. ಲಹರಿಯ ಕಣ್ಮರೆಯ ಹಿಂದೆ ಮೇನಕಾಳ ಕೈವಾಡವಿದೆ ಅನ್ನೋದು ಕಾಶಮ್ಮನ ಅಪವಾದ'

ಇನ್ಸ್‌ಪೆಕ್ಟರ್ ಕೇಳಿದ ಪ್ರಶ್ನೆಗಳಿಗೆ ಉತ್ತರವಿತ್ತ ಕಿರಣ ಅವನ ದೃಷ್ಟಿಯಲ್ಲಿ ಒಳ್ಳೆಯವನಾಗಿ ಕಂಡ.

'ನಿನ್ನ ಮಾತು ಸತ್ಯ. ಅದನ್ನು ನಾನೂ ಗಮನಿಸಿದ್ದೀನಿ. ಮೇನಕಾ ಎಲ್ಲೂ ಕಾಣಿಸ್ತಿಲ್ಲವಲ್ಲ' ಅಧಿಕಾರಿಯದ್ದು ಕುತೂಹಲದ ಪ್ರಶ್ನೆಯಾಗಿತ್ತು.

ಕಿರಣನ ಮುಖ ಗಂಭೀರವಾಯಿತು.

'ನೀವು ಕೇಳೋದು ಸರೀನೆ. ಅವಳಿಲ್ಲದ ಸಮಯದಲ್ಲಿ ನಂಗೇನು ಕೆಲಸ ಇಲ್ಲಿ, ಅಲ್ವೆ? ಇನ್ಸ್‌ಪೆಕ್ಟರ್ ಸಾಹೇಬ್ರೆ ನಾನು ಬರೀ ಮೇನಕಾಳನ್ನ ಮದುವೆಯಾಗೋನಲ್ಲ, ಈ ಕುಟುಂಬದ ಹಿತೈಷಿ ಕೂಡ. ಹಾಗಾಗಿ ನನ್ನ ಅಗತ್ಯ ಇಲ್ಲಿಯ ಜನರಿಗಿದೆ. ಅದು ಕೆಲಸದವರು ಆಗಿರಬಹುದು ಅಥವಾ ಮೇನಕಾಳ ಸಂಬಂಧಿಗಳಿರಬಹುದು' ಕಿರಣನ ಮಾತು ಒಗಟಾಗಿ ಕಂಡಿತು ಅಧಿಕಾರಿಗೆ.

'ಅಂದ್ರೆ, ಏನರ್ಥ? ನೀವು ಈಗ್ಲೆ ಈ ಮನೇಲಿ ಒಬ್ಬರಾಗಿ ಹೋದ್ರಾ?' ಇನ್ಸ್‌ಪೆಕ್ಟರ್ ಮುಖದಲ್ಲಿ ವ್ಯಂಗ್ಯ ಬೆರೆತ ನಗುವಿತ್ತು. ಕಿರಣನಿಗೆ ಸ್ವಾಭಿಮಾನದ ಪ್ರಶ್ನೆ.

'ಸಾಹೇಬ್ರೆ, ನಾನು ಸ್ವತಂತ್ರ ಜೀವಿ. ಮಾರುಕಟ್ಟೆ ವಿಭಾಗದಲ್ಲಿ ನುರಿತ ಸಲಹೆಗಾರ. ಮೇನಕಾನ ಪ್ರೀತಿಸಿದ್ರಿಂದ ನನ್ನ ಹಾಗೂ ಈ ಮನೆಯ ಸಂಬಂಧಕ್ಕೆ ಅನುಕೂಲವಾಯ್ತು. ಈ ಮನೆಯಲ್ಲಿ ಎಲ್ಲರೂ ನನ್ನಿಂದ ಸಾಂತ್ವನ ಬಯಸೋರು. ಲಹರಿ ಕಾಣೆಯಾದ ಮೇಲೆ ಎಲ್ಲರಿಗೂ ಸಮಾಧಾನ ತುಂಬಿದೋನು ನಾನು. ಕಾಶಮ್ಮಂಗೆ ನಾನಂದ್ರೆ ಅಚ್ಚುಮೆಚ್ಚು. ಏನಾದ್ರೂ ಸಹಾಯ ಬೇಕಾದ್ರೆ ನನ್ನ ಕರೆಯೋರು. ಹಾಗಾಗಿ ವಾರದಲ್ಲಿ ಎರಡು ಮೂರು ಬಾರಿ ನಾನು ಈ ಮನೆಗೆ ಭೇಟಿ ಕೊಡ್ತೀನಿ. ನಿನ್ನೆನೂ ನಾನು ಇಲ್ಲಿಗೆ ಬರೋ ಅನಿವಾರ್ಯತೆ ಇತ್ತು. ಕಾಕುಟ್ಟ ಬಹಳ ತೊಂದ್ರೆ ಮಾಡ್ತಾಂತ ಮೇನಕಾ ಹೇಳಿದ್ಲು'

ಅಧಿಕಾರಿಯ ಮುಖ ಕುತೂಹಲದ ಗೂಡಾಯಿತು. ಮೇನಕಾ ಅಧಿಕಾರಿಗೂ ಅದೇ ವಿಷಯ ಹೇಳಿದ್ದರಿಂದ ಅದರ ತನಿಖೆಗಾಗಿ ಬಂದಿದ್ದ. ಹಿಂದಿನ ದಿನ ನಡೆದ ಘಟನೆಯನ್ನೆಲ್ಲಾ ಚಾಚೂ ತಪ್ಪದೆ ಹೇಳಿದ್ದಲ್ಲದೆ ತನ್ನ ಹಾಗೂ ಕಿರಣನ ಜೀವಕ್ಕೂ ಅಪಾಯವಿರುವುದನ್ನು ಹೇಳಿದ್ದಳು. ಆ ವಿಷಯದ ತನಿಖೆಗಾಗಿ ಕಾಶಮ್ಮನನ್ನು ಪ್ರಶ್ನಿಸಲು ಬಂದ ಅಧಿಕಾರಿಗೆ ಕಿರಣನ ಭೇಟಿ